ಯುಗಾದಿ ಪ್ರಬಂಧ ಸ್ಪರ್ಧೆ 2025

ತೀರ್ಪುಗಾರರು ಮೆಚ್ಚಿದ ಪ್ರಬಂಧ

◆ ರವಿ ಚಂದರ್
ಕಲೆ: ರಾಮಕೃಷ್ಣ ಸಿದ್ರಪಾಲ



ತೆಗೆಯಲಾಗಲಿಲ್ಲ. ನನ್ನ ಕೊರಗು ತಿಳಿಯಿತೇನೋ ಎಂಬಂತೆ ಅಪ್ಪ ಗುಬ್ಬಿ ಗೂಡನ್ನು ಬಿಟ್ಟು ಪಕ್ಕದ ಮತ್ತೊಂದು ಕಿಟಕಿಯ ಮೇಲೆ ಕುಳಿತಾಗ ತಕ್ಷಣ ನನ್ನ ಮೊಬೈಲ್‌ನಲ್ಲಿ ಒಂದೆರಡು ಫೋಟೊ ಕ್ಲಿಕ್ಕಿಸಿದೆ.

ಆ ಸುಂದರ ಕುಟುಂಬವನ್ನು ನೋಡುತ್ತ ಐದು ಹತ್ತು ನಿಮಿಷ ಕಳೆದ ನಂತರ ನನ್ನ ಮನಸ್ಸು ಯೋಚಿಸಲು ಪ್ರಾರಂಭಿಸಿತು. ಮುಂಬೈನ ನರಿಮನ್ ಪಾಯಿಂಟಿನ ಗಿಡ–ಮರದ ಸುಳಿವೇ ಇಲ್ಲದ ಗಗನಚುಂಬಿ ಕಟ್ಟಡಗಳ ರಾಶಿಯ ಕಾಂಕ್ರೀಟ್ ಕಾಡಿನ ಮಧ್ಯ ಯಾವುದೋ ಹೋಟೆಲಿನ ಐದನೇ ಮಹಡಿಯ ಕಿಟಕಿಯಲ್ಲಿ ಗುಬಚ್ಚಿಯ ಸಂಸಾರ. ಹಾಗಾದರೆ ಉದ್ಯಾನನಗರಿ ಬೆಂಗಳೂರಿನಿಂದ, ನಮ್ಮೆಲ್ಲರ ನಡುವಿನಿಂದ ಇದೇ ಸುಂದರ, ಪುಟ್ಟ ಗುಬ್ಬಿ ಕಾಣೆಯಾಗಲು ಕಾರಣವೇನು? ನಮ್ಮೆಲ್ಲರ ಭಾವನೆಯಂತೆ ಮೊಬೈಲ್ ಫೋನಿನ ಕಿರಣಗಳ ಪ್ರಭಾವ ಅಲ್ಲ ಎಂದು ಮೊದಲ ಬಾರಿಗೆ ನನಗೆ ಆಗ ಅನ್ನಿಸಿತು. ಏಕೆಂದರೆ, ಮೊದಲೇ ತಿಳಿಸಿದಂತೆ ವಾಣಿಜ್ಯ ರಾಜಧಾನಿ ಮುಂಬೈ ನಗರದ ವಾಣಿಜ್ಯ ವಹಿವಾಟಿನ ಕೇಂದ್ರಬಿಂದು ನರಿಮನ್ ಪಾಯಿಂಟ್. ಅಲ್ಲೇನು ಫೋನಿನ ಕಿರಣಗಳ ಪ್ರವಾಹ ಕಡಿಮೆ ಇರುತ್ತದೆಯೆ? ಇಷ್ಟಾಗಿ ಇಲ್ಲೊಂದು ಗುಬ್ಬಿ ಕುಟುಂಬ ಸಂತೋಷವಾಗಿ ಚಿಲಿಪಿಲಿಗುಟ್ಟುತ್ತಿದೆಯಲ್ಲ – ಹೇಗೆ?

ಮುಂಬೈನ ಜನ ಭಿಕ್ಷುಕರಿಗೆ ಊಟ ಹಾಕುವುದಕ್ಕಿಂತಲೂ ಹೆಚ್ಚಿಗೆ ಪಾರಿವಾಳಗಳಿಗೆ ಕಾಳು ಹಾಕುತ್ತಾರೆ. ಛತ್ರಪತಿ ಶಿವಾಜಿ ರೈಲು ನಿಲ್ದಾಣ (ಹಳೆಯ ವಿಕ್ಟೋರಿಯ ಟರ್ಮಿನಸ್) ಹತ್ತಿರ ಪಾರಿವಾಳಗಳಿಗೆ ಕಾಳು ಹಾಕಲು ‘ಕಬೂತರ್ ಖಾನಾ’ ಎಂಬ ಜಾಗವೇ ಇದೆ. ಬಹುಶಃ ಈ ರೀತಿಯ ಜಾಗಗಳಲ್ಲಿ ಸಿಗುವ ಕಾಳನ್ನು ತಿಂದು ಈ ಗುಬ್ಬಚ್ಚಿ ಕುಟುಂಬ ಬದುಕುತ್ತಿರಬಹುದೋ ಎನ್ನಿಸಿತು. ಇಲ್ಲಿಯೂ ಕೂಡ ಅತ್ಯಂತ ವಿರೋಧಾಭಾಸದ ಪರಿಸ್ಥಿತಿಯಲ್ಲಿ ಮೂರು ಮಕ್ಕಳೊಂದಿಗೆ ಸಂತೋಷದಿಂದ ಸಂಸಾರ ನಡೆಸುತ್ತಿರುವ ಗುಬ್ಬಚ್ಚಿ ದಂಪತಿ ಬಗ್ಗೆ ಆಶ್ಚರ್ಯದ ಜೊತೆ ಖುಷಿಯೂ ಆಯಿತು.

### ಅಧ್ಯಾಯ–3

## ಸ್ಯಾಂಕಿ ಟ್ಯಾಂಕಿನ ಮರ

ಬೆಂಗಳೂರಿನ ಮಲ್ಲೇಶ್ವರ ಹಾಗೂ ಸದಾಶಿವನಗರದ ಮಧ್ಯೆ ಇರುವ ಸ್ಯಾಂಕಿ ಟ್ಯಾಂಕ್ (ಕೆರೆ) ಬೆಳಗಿನ ಅಥವಾ ಸಾಯಂಕಾಲದ ವಾಕಿಂಗ್ (ಹಾಗೂ ರನ್ನಿಂಗ್) ಹವ್ಯಾಸಿಗಳಿಗೆ ಒಂದು ಉತ್ತಮ ತಾಣ. ಸುಮಾರು ಎರಡು ಕಿಲೋಮೀಟರಿನಷ್ಟು ಸುತ್ತಳತೆಯ ಈ ಕೆರೆಯ ದಂಡೆಯಲ್ಲಿ ಎರಡು ಭಾಗ ಮಾಡಿ, ನಡೆಯುವವರಿಗೆ ಹಾಗೂ ಓಡುವವರಿಗೆ ಪ್ರತ್ಯೇಕ ಅನುಕೂಲ ಮಾಡಲಾಗಿದೆ. ಯೋಗ ಮಾಡುವವರಿಗೆ ಮಂಟಪ, ಮಕ್ಕಳಿಗೆ ಆಡಲು ಪ್ರತ್ಯೇಕ ವ್ಯವಸ್ಥೆ ಕೂಡ ಇದೆ. ಕೆರೆಯ ನೀರಿನ ಮೇಲಿಂದ ಹಾಯ್ದು ಬರುವ ತಂಗಾಳಿ, ನೀರಿನಲ್ಲಿ ನಿಶ್ಶಬ್ದವಾಗಿ ತೇಲುವ ಬಾತುಕೋಳಿಗಳು, ಒಳಗೆ ಅಷ್ಟೇ ನಿಶ್ಶಬ್ದವಾಗಿ ಈಜುತ್ತಾ ಆವಾಗೊಮ್ಮೆ ಈವಾಗೊಮ್ಮೆ ತಮ್ಮ ಇರುವಿಕೆಯನ್ನು